ಅ) ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕು ಆಲೂರು ಸಿದ್ದಾಪುರದ ಪಶುಚಿಕಿತ್ಸಾಲಾಯದ ಕಟ್ಟಡ ದುರಸ್ತಿಯನ್ನು ಎಷ್ಟು ವೆಚ್ಚದಲ್ಲಿ ಯಾವಾಗ ಕೈಗೊಳ್ಳಲಾಯಿತು: ಈ ದುರಸ್ತಿ ಕಾರ್ಯವನ್ನು ಯಾರಿಗೆ ವಹಿಸಲಾಗಿತ್ತು?

ಆ) ಅಂದಾಜು ಪಟ್ಟಿಯ ಪ್ರಕಾರ ದುರಸ್ತಿಗೆ ಮತ್ತಿ ಹೊನ್ನೆ ಅಥವಾ ನಂದಿ ಮರವನ್ನು ಉಪಯೋಗಿಸಬೇಕೆಂದು ಇದ್ದರೂ ಕಂಟ್ರಾಕ್ಟರ್ ಕಳಪೆ ಜಾತಿಯ ಮರ ಉಪಯೋಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ರೀತಿ ಅಕ್ರಮ ಎಸಗಿದ ಅಧಿಕಾರಿ ಕಂಟ್ರಾಕ್ಟರ್ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ಫೆಬ್ರುವರಿ ಮಾರ್ಚ್ 2002ರಲ್ಲಿ ದುರಸ್ತಿ ಕಾರ್ಯವನ್ನು ಸೋಮವಾರಪೇಟೆ ಜಿಲ್ಲಾ ಪಂಚಾಯತ್ ಇಂಜನಿಯರಿಂಗ್ ವಿಭಾಗದವರಿಗೆ ವಹಿಸಲಾಗಿತ್ತು.

ಅಂದಾಜು ಮೊತ್ತ : ರೂ. 70 ಲಕ್ಷಗಳು

ಖರ್ಚು : ರೂ. 0.58 ಲಕ್ಷಗಳು

ಆ) ಹೌದು

ಇ) ಸಂಬಂಧಪಟ್ಟ ಪಶುವೈದ್ಯಾಧಿಕಾರಿಯವರು ಮತ್ತು ಉಪ ನಿರ್ದೇಶಕರು; ಕೊಡಗು ಇವರು ಅಂದಾಜು ಪಟ್ಟಿಯಂತೆ ಕಾಮಗಾರಿಯನ್ನು ಸರಿಪಡಿಸಲು ಕ್ರಮ ವಹಿಸುವಂತೆ ಸೋಮವಾರಪೇಟೆಯ ಜಿಲ್ಲಾ ಪಂಚಾಯತಿಯ ಇಂಜನಿಯರಿಂಗ್ ವಿಭಾಗಕ್ಕೆ ವರದಿ ಮಾಡಿರುತ್ತಾರೆ.

ರಾಜ್ಯದಲ್ಲಿ ಇಥೆನಾಲ್ ತಯಾರಿಕೆ

1290(1731) ಶ್ರೀ ಎಂ.ಎಸ್.ಆತ್ಮಾನಂದ (ಮಂಡ್ಯ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಸಕ್ಕರೆ ಉದ್ಯಮದ ಉಪ ಉತ್ಪನ್ನ (ಬೈಪ್ರಾಡಕ್ಟ್)ವಾದ ಇಥೆನಾಲ್ ಪ್ರಾಯೋಗಿಕವಾಗಿ ತಯಾರಿಸಲು ಕೇಂದ್ರ ಸರ್ಕಾರ ಅನುಮತಿ ನೀಡಿದೆಯೆ; ಪ್ರಾಯೋಗಿಕ ತಯಾರಿಕೆಗಾಗಿ ಕೇಂದ್ರ ಸರ್ಕಾರ ಪ್ರೋತ್ಸಾಹ ನೀಡುತ್ತದೆಯೆ?

ಆ) ಹಾಗಿದ್ದಲ್ಲಿ ಅದರ ವಿವರಗಳೇನು?

ಇ) ರಾಜ್ಯ ಸರ್ಕಾರವು ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿ "ಇಥೆನಾಲ್" ತಯಾರಿಕೆಗಾಗಿ ಅದನ್ನು ವಾಣಿಜ್ಯ ಬಳಕೆಗಾಗಿ ವಿಶೇಷವಾದ ಕಾರ್ಯಕ್ರಮಗಳನ್ನು ಏನಾದರೂ ರೂಪಿಸಿದ್ದಲ್ಲಿ, ಅದರ ವಿವರಗಳೇನು?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ಕೇಂದ್ರ ಸರ್ಕಾರವು ರಾಜ್ಯದ ಐದು ಸಕ್ಕರೆ ಕಾರ್ಖಾನೆಗಳಿಗೆ ಇಥೆನಾಲ್ ಅನ್ನು ಪ್ರಯೋಗಿಕವಾಗಿ ತಯಾರಿಸಲು ಅನುಮತಿ ನೀಡಿದೆ. ಹಾಗೂ ಇದರ ಪ್ರಯೋಗಿಕ ತಯಾರಿಕೆಗಾಗಿ ಪ್ರೋತ್ಸಾಹ ನೀಡುತ್ತಿದೆ.

ಆ) ಕೇಂದ್ರ ಸರ್ಕಾರವು ಕಬ್ಬಿನ ಸಂಸ್ಕರಣೆಯಿಂದ ಇಥೆನಾಲ್ ಉತ್ಪಾದನೆಗೆ ಕರ್ನಾಟಕವೂ ಸೇರಿದಂತೆ ಪ್ರಮುಖ ಕಬ್ಬು ಬೆಳೆಯುವ ಸುಮಾರು 8 ರಾಜ್ಯಗಳಿಗೆ ಅನುಮತಿ ನೀಡಿದೆ. ಅದರಂತೆ

ಕರ್ನಾಟಕದಲ್ಲಿ ಸುಮಾರು 5 ಸಕ್ಕರೆ ಕಾರ್ಖಾನೆಗಳು ಇಥೆನಾಲ್ ಉತ್ಪಾದನೆಗೆ ಮುಂದೆ ಬಂದಿವೆ. ಈಗಾಗಲೇ ಪ್ರಾಥಮಿಕ ಹಂತದ ಪ್ರಕ್ರಿಯೆಗಳು ಪ್ರಾರಂಭವಾಗಿದ್ದು ಮುಂದಿನ ಎರಡು ಅಥವಾ ಮೂರು ವರ್ಷಗಳ ಅವಧಿಯಲ್ಲಿ ಈ ಕಾರ್ಖಾನೆಗಳು ಉತ್ಪಾದನೆ ಪ್ರಾರಂಭಿಸುವ ನಿರೀಕ್ಷೆ ಇದೆ. ಇದಕ್ಕಾಗಿ ಕೇಂದ್ರ ಸರ್ಕಾರವು ಸಕ್ಕರೆ ಅಭಿವೃದ್ಧಿ ನಿಧಿಯಿಂದ ಸಾಲದ ವ್ಯವಸ್ಥೆ ಮಾಡಲು ಮುಂದೆ ಬಂದಿದೆ. ಅದೇ ರೀತಿ ಪೆಟ್ರೋಲ್: ಡೀಸೆಲ್ ಜೊತೆ ಶೇಕಡ 5ರ ಪ್ರಮಾಣದಲ್ಲಿ ಬೆರೆಸಿ ಮಾರಾಟ ಮಾಡುವ ಇಂಧನ ಕಂಪನಿಗಳಿಗೆ ಉತ್ತೇಜನ ನೀಡಲು ತೆರಿಗೆ ರಿಯಾಯಿತಿ ನೀಡಲು ಕೂಡ ಕೇಂದ್ರ ನಿರ್ಧರಿಸಿದೆ. ಅದರಂತೆ ಸಕ್ಕರೆ ಅಭಿವೃದ್ಧಿ ನಿಧಿಯಿಂದ ಇಥೆನಾಲ್ ಘಟಕ ಸ್ಥಾಪಿಸಲು ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಲು ನಿಯಮಗಳಲ್ಲಿ ತಿದ್ದುಪಡಿಗಳನ್ನು ತಂದಿರುತ್ತದೆ.

ಇ) ರಾಜ್ಯ ಸರ್ಕಾರದಿಂದಲೂ ಕೂಡ ಈಗಾಗಲೇ ಡಿಸ್ಟಿಲರಿ ಘಟಕ ಹೊಂದಿರುವ ಸಕ್ಕರೆ ಕಾರ್ಖಾನೆಗಳಿಗೆ ಅವುಗಳು ಕೋರಿದಲ್ಲಿ, ಇಥೆನಾಲ್ ಘಟಕ ಪ್ರಾರಂಭಿಸಲು ಅನುಮತಿ ನೀಡಲು ಕ್ರಮ ತೆಗೆದುಕೊಳ್ಳಲಾಗುತ್ತದೆ. ಇಥೆನಾಲ್‌ನ್ನು ಪೆಟ್ರೋಲ್‌ನಲ್ಲಿ ಮಿಶ್ರಣ ಮಾಡುವ ಬಳಕೆ ಬಿಟ್ಟು ಬೇರೆ ರೀತಿಯ ವಾಣಿಜ್ಯ ಬಳಕೆಗೆ ಈಗ ಅವಕಾಶವಿಲ್ಲ.

ರೇಷ್ಮೆ ಬೆಲೆ ಕುಸಿತ

1291(1737) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರೇಷ್ಮೆ ಬೆಲೆ ಕುಸಿತದಿಂದಾಗಿ ರೇಷ್ಮೆ ಕೃಷಿಯನ್ನು ಕೃಷಿಕರು ಕೈಬಿಡುವ ಪರಿಸ್ಥಿತಿಯು ತಲೆದೋರಿರುವುದನ್ನು ಸರ್ಕಾರವು ಗಮನಿಸಿದೆಯೆ?

ಆ) ರೇಷ್ಮೆ ಬೆಲೆ ಕುಸಿತವನ್ನು ತಡೆಗಟ್ಟಲು ಸರ್ಕಾರವು ಮಾರ್ಗೋಪಾಯಗಳನ್ನು ಆಲೋಚಿಸಿದೆಯೆ? (ವಿವರ ನೀಡುವುದು)

ಇ) ಕೃಷಿಕರಿಂದ ರಾಜ್ಯದಲ್ಲಿ ರೇಷ್ಮೆಯನ್ನು ಬೆಂಬಲ ಬೆಲೆ ನೀಡಿ ಕೊಳ್ಳಲಾಗಿದೆಯೆ?

ಈ) ಹಾಗಿದ್ದಲ್ಲಿ ಇದರ ಬಗ್ಗೆ ಮಾಹಿತಿ ನೀಡುವುದು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು):

ಅ) ಹಿಂದಿನ ವರ್ಷಕ್ಕೆ ಹೋಲಿಸಿದಾಗ ರೇಷ್ಮೆ ಗೂಡಿನ ದರ ಕಡಿಮೆಯಾಗಿದೆ.

ಆ) ಹೌದು, ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ಒತ್ತಾಯಿಸಲಾಗಿದೆ.

1.1. ರೇಷ್ಮೆ ಆಮದನ್ನು ನಿಯಂತ್ರಿಸುವುದು.

2. ಆಮದು ಸುಂಕವನ್ನು ಹೆಚ್ಚಿಸುವುದು.

3. ಮಾರುಕಟ್ಟೆ ಪ್ರವೇಶಿಸಿ ರೇಷ್ಮೆಗೂಡು:ಕಚ್ಚಾ ರೇಷ್ಮೆ ಖರೀದಿಸಲು ಅನುಕೂಲವಾಗುವಂತೆ ಕೇಂದ್ರ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ ಮತ್ತು ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಗೆ ಹಣ ಒದಗಿಸಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ.

4. ಅರ್ಹ ರಫ್ತುದಾರರಿಗೆ ಮಾತ್ರ ರೇಷ್ಮೆ ಆಮದಿಗೆ ಅವಕಾಶ ನೀಡುವುದು.

5. ನೇಪಾಳ ಹಾಗೂ ಬಾಂಗ್ಲದೇಶಗಳ ಗಡಿ ಮೂಲಕ ಚೀನಾ ರೇಷ್ಮೆ ಭಾರತದೊಳಕ್ಕೆ ಕಳ್ಳ ಸಾಗಣೆಯಾಗುವುದನ್ನು ತಪ್ಪಿಸುವುದು.